| | | |
|---|---|---|
| OS | 96/2019 | ಪಿ.ಡಬ್ಲ್ಯೂ: 2 |

ಇಂದು ದಿ: 19.11.2024 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ವಾದಿಪರ ವಕೀಲರಿಂದ:

ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣಪತ್ರ ಸಲ್ಲಿಸಿದ್ದು ಅದರಲ್ಲಿ ಹೇಳಿರುವ ವಿಚಾರಗಳು ಸತ್ಯವಾಗಿದ್ದು, ನಾನೇ ಹೇಳಿ ಬರೆಸಿರುತ್ತೇನೆ.

ನಿ ಪಿ 6 ರಲ್ಲಿ ಸಾಕ್ಷಿಯು ತನ್ನ ಸಹಿ ಗುರುತಿಸಿದ್ದು ಅದನ್ನು ನಿ ಪಿ 6 ಇ ಎಂದು ಗುರುತಿಸಲಾಯಿತು.

ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಡಿ ಜೆ ವಕೀಲರಿಂದ:

ಪುಟ್ಟಸ್ವಾಮಿ ಮತ್ತು ನನ್ನ ಸಹೋದರಿಗೆ ಆದ ವ್ಯವಹಾರದ ಬಗ್ಗೆ ನನಗೆ ಗೊತ್ತು. ಆ ದಿನ ಪುಟ್ಟಸ್ವಾಮಿ ನನ್ನ ಸಹೋದರಿಗೆ ರೂ. 10 ಲಕ್ಷ ಕೊಟ್ಟಿದ್ದರು ಎಂದು ನನಗೆ ಗೊತ್ತು. ನಾನು ಎಂ ಬಿ ಎಡ್ ಓದಿದ್ದೇನೆ. ಸದ್ಯ ನಾನು ಮೈಸೂರಿನ ಲಕ್ಷ್ಮಿಪುರಂ ನಲ್ಲಿ ವಾಸವಿದ್ದೇನೆ. ನಾನು ಯಾವುದೇ ಆಸ್ತಿ ಖರೀದಿಸಿಲ್ಲ ಮತ್ತು ಮಾರಾಟ ಮಾಡಿಲ್ಲ. ಯಾವುದೇ ಆಸ್ತಿ ಬಗ್ಗೆ ಸರ್ಕಾರದ ಮೌಲ್ಯ ಮತ್ತು ಮಾರುಕಟ್ಟೆ ಮೌಲ್ಯ ಇರುತ್ತದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಪ್ರತಿವಾದಿ ಕ್ರಯದ ಕರಾರನ್ನು ಮಾಡಿಕೊಳ್ಳುವ ಮೊದಲು ಕೊಟ್ಟ ದಾವಾ ಸ್ವತ್ತು ಸಂಬಂಧಿ ದಾಖಲೆ ನೋಡಿದ್ದೇನೆ. ನಾನು ನೋಂದಣಿ ಪೂರ್ವದಲ್ಲಿ ಓದಿದ ದಾಖಲೆಯೇ ನೋಂದಣಿ ಆಯಿತು. 60-70 ಲಕ್ಷಕ್ಕೆ ವ್ಯವಹಾರವಾದರೂ ಆಸ್ತಿ ಮೌಲ್ಯವನ್ನು ಯಾಕೆ ಕಡಿಮೆ ತೋರಿಸಿದ್ದೀರಾ ಎಂದು ನಾನು ಮತ್ತು ನನ್ನ ಸಹೋದರಿ ಕೇಳಿಲ್ಲ. ವಾದಿ ಮತ್ತು ಪ್ರತಿವಾದಿ ನಡುವೆ ಆದ ಮಾತುಕತೆ ಬಗ್ಗೆ ನನಗೆ ಗೊತ್ತಿಲ್ಲ. ಸರ್ಕಾರಿ ಮೌಲ್ಯದ ಬಗ್ಗೆ ನೋಂದಣಿ ಮಾಡಿ ಉಳಿದ ಹಣದ ಬಗ್ಗೆ ಇನ್ನೊಂದು ನೋಂದಣಿ ಮಾಡಿಕೊಳ್ಳೋಣ ಎಂದು ಮಾತುಕತೆ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಪ್ರಕರಣವನ್ನು ಸಂಪೂರ್ಣ ಓದಿದ್ದೇನೆ. ವಾದಿ ತನ್ನ ದಾವಾದಲ್ಲಿ ಮಾರುಕಟ್ಟೆ ಮೌಲ್ಯ ಮತ್ತು ಸರ್ಕಾರದ ಮೌಲ್ಯದ ಬಗ್ಗೆ ಕರಾರಾದ ಬಗ್ಗೆ ಹೇಳಿದ ಬಗ್ಗೆ ನನಗೆ ಗೊತ್ತಿಲ್ಲ. ವಾದಿ ನಿಗದಿಪಡಿಸಿದ ಸಮಯದೊಳಗೆ ನೋಟಿಸು ಕೊಟ್ಟಿದ್ದಾರಾ ಎಂದರೆ ನನಗೆ ಗೊತ್ತಿಲ್ಲ. ವಾದಿ ನನ್ನ ಸಹೋದರಿಯಾದ ಕಾರಣ ವಾದಿ ಮತ್ತು ಪ್ರತಿವಾದಿ ಮಾಡಿದ ವ್ಯವಹಾರದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ ಎಂದರೆ ಸರಿಯಲ್ಲ.

ನೋಂದಣಿಗೆ ಬೇಕಾದ ದಾಖಲೆಗಳನ್ನು ಕೊಡದೆ ಪ್ರತಿವಾದಿ ವಿರುದ್ಧ ದಾವೆ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಆಸ್ತಿ ಬೇಕು ಎಂದು ಪ್ರತಿವಾದಿ ಸಲ್ಲಿಸಿದ ಇನ್ನೊಂದು ದಾವೆ ಬಗ್ಗೆ ನನಗೆ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿ ನಡುವೆ ಯಾವೆಲ್ಲಾ ಮಾತುಕತೆ ಆಗಿತ್ತು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ ಆದರೆ ಉದ್ದೇಶ ನನಗೆ ಗೊತ್ತು ಎಂದು ಸಾಕ್ಷಿ ನುಡಿಯುತ್ತಾರೆ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

sd/-

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ನಂಜನಗೂಡು.